**IV ನೇ ಹೆಚ್ಚುವರಿ ದಿವಾಣಿ ನ್ಯಾಯಾಲಯ ಹಾಗೂ ಜೆ ಎಮ್ ಎಫ್ ಸಿ, ಬೆಳಗಾವಿ**

**OS.No.625/2015**

**PW-1**

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 11-09-2023.**

ಪಾಟೀ ಸವಾಲು ಪ್ರತಿವಾದಿಪರ ವಕೀಲರು ಶ್ರೀಮತಿ.AGB ರವರಿಂದ.

ನಾನು MA ಪದವಿಧರ. ನನಗೆ ಕನ್ನಡ ಓದಲು ಮತ್ತು ಮಾತನಾಡಲು ಬರುತ್ತದೆ. ನಿಮಗೆ 2 ನೇ ವಾದಿ ಈ ದಾವೆಯನ್ನು ನೆಡೆಸಲು power of attorney ನೀಡಿರುತ್ತಾರೆಯೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಸದರಿ power of attorney ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿಗೆ ತಾನು ಹಾಜರು ಪಡಿಸಿರುವ ದಾಖಲೆಗಳನ್ನು ತೋರಿಸುತಿದ್ದು ಅವುಗಳಲ್ಲಿ 2 ನೇ ವಾದಿ ನಿಮಗೆ power of attorney ಬರೆದುಕೊಟ್ಟಿರುವ ಬಗ್ಗೆ ದಾಖಲೆ ಇದೆಯ ಎಂದು ನೋಡಿ ಹೇಳಿ ಎಂದಾಗ ಸಾಕ್ಷಿ ತಾನು ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ power of attorney ಹಾಜರು ಪಡಿಸಿರುವುದಿಲ್ಲ ಎನ್ನುತ್ತಾರೆ. 2 ನೇ ವಾದಿ ಕಾಂಗ್ರೇಸ್ ಪಕ್ಷದ ಸಕ್ರೀಯ ಕಾರ್ಯಕರ್ತ ಎಂದರೆ ಸರಿ. 2 ನೇ ವಾದಿಗೆ ನಿಮಗಿಂತಲೂ ದಾವೆ ಹಾಗೂ ದಾವಾಸ್ವತ್ತಿನ ಬಗ್ಗೆ ಚನ್ನಾಗಿ ಮಾಹಿತಿ ಇರುತ್ತದೆ ಎಂದರೆ ಅವರಿಗೆ ನನಗಿಂತ ಚನ್ನಾಗಿ ಮಾಹಿತಿ ಇದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಹೇಗೆ ಹೇಳಲಾಗುತ್ತದ ಎನ್ನುತ್ತಾರೆ. ದಾವಾಸ್ವತ್ತಿನ ಬಗ್ಗೆ ನನಗೆ ಗೊತ್ತಿರುತ್ತದೆ. ದಾವಾಸ್ವತ್ತಿನ ಸರ್ವೇ ನಂ.230/6 ಶಾಸ್ತರಿ ನಗರ, ಬೆಳಗಾವಿಯಲ್ಲಿರುತ್ತದೆ. RS No.230 ರಲ್ಲಿ ಎಷ್ಟು subdivision number ಗಳಾಗಿರುತ್ತವೆ ಎಂದು ನನಗೆ ನೆನಪಿಲ್ಲ. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ನನ್ನ ತಾತ ದಾವಾಸ್ವತ್ತನ್ನು 1966 ರಲ್ಲಿ ಖರೀದಿ ಮಾಡಿರುತ್ತಾರೆ ಆದರೆ ನನಗೆ ದಿನಾಂಕ ಹೇಳಲಾಗುವುದಿಲ್ಲ. ನೀವು ನಿಮ್ಮ ತಾತ ಖರೀದಿ ಮಾಡಿದ್ದಾರೆ ಎನ್ನಲಾದ ದಾವಾಸ್ವತ್ತಿಗೆ ಸಂಬಂಧಿಸಿದ ಕ್ರಯಪತ್ರವನ್ನು ಹಾಜರು ಪಡಿಸಿರುತ್ತೀರ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಯಾವ ವರ್ಷದಲ್ಲಿ RS No.230, 11 subdivision ಗಳಾಗಿ ವಿಂಗಡನೆಗೊಂಡಿರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನಿಮ್ಮ ಮತ್ತುRS No.230 ರ ಮಾಲೀಕರ ನಡುವೆ ಬೌಂಡರಿ dispute ಇದ್ದ ಕಾರಣ ನಿಮ್ಮ ತಂದೆ ಹಾಗೂ ಚಕ್ಕಪ್ಪರವರು OS 110/2004 ನ್ನು ಹೂಡಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾವೆ ಎಲ್ಲಿ ರಾಜಿ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ದಾವೆಯಲ್ಲಿ RS No.230/6 ನ್ನು ಮತ್ತೊಮ್ಮೆ ಅಳತೆ ಮಾಡಿಸಿ ಹೊಸದಾಗಿ ಪಿಟಿ ಶೀಟನ್ನು ಪಡೆಯ ಬೇಕು ಎಂಬ

ಶರತ್ತಿನೊಂದಿಗೆ ರಾಜಿ ಆಗಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. RS.No.230/6 ಕ್ಕೆ ಸಂಬಂಧಿಸಿದ ಮೊದಲ ಪಿಟಿ ಶೀಟನ್ನು ರದ್ದುಗೊಳಿಸಲಾಗಿತ್ತು ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ.

ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ. ಸರಿಯಿದೆ.

Sd/-

4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ
ಜೆ.ಎಂ.ಎಫ್.ಸಿ, ಬೆಳಗಾವಿ.